**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಗೋವಿಂದ ರಾಜು ಇವರು ನಿಯಮ 72 ರಡಿ ಮಂಡಿಸಿರುವ ಸೂಚನೆಗೆ ಸರ್ಕಾರದ ಹೇಳಿಕೆ:**

**ಸೂಚನೆ:**

ಕೋಲಾರ ನಗರಕ್ಕೆ ಅಂಟಿಕೊಂಡಿರುವ ಶತಶೃಂಗ ಬೆಟ್ಟದ ಸಾಲಿನಲ್ಲಿರುವ ಅಂತರಗಂಗೆ ಸುತ್ತಮುತ್ತ ಭೂಕಬಳಿಕೆದಾರರ ಅಟ್ಟಹಾಸ ಮಿತಿಮೀರಿದ್ದು ಸರ್ಕಾರಿ ಜಾಗವನ್ನು ಉಳಿಸ ಬೇಕಾದ ಕಂದಾಯ ಇಲಾಖೆ ಮೌನಕ್ಕೆ ಶರಣಾಗಿರುವುದು ಸಂಶಯಕ್ಕೆ ಎಡೆಮಾಡಿಕೊಟ್ಟಿದೆ. ಅಂತರಗಂಗೆ ಬೆಟ್ಟದ ಮೇಲೆ ಬರುವ 7 ಹಳ್ಳಿಗಳಲ್ಲಿ ಬಹುತೇಕ ಜಮೀನು ಅರಣ್ಯ ಇಲಾಖೆಗೆ ಸೇರಿದ್ದು ಅಳಿದುಳಿದ ಭೂಮಿ ಗೋಮಾಳವಾಗಿದ್ದು ಸಣ್ಣಪುಟ್ಟ ಕಲ್ಲುಗುಡ್ಡಗಳನ್ನು ಹೊಂದಿದೆ. ಇಂತಹ ಸ್ಥಳದ ಮೇಲೆ ಕಣ್ಣಾಕಿರುವ ಭೂಬಳಿಕೆದಾರರು 100 ರೂ.ಛಾಪಾ ಕಾಗದದ ಮೇಲೆ ಯಾರ ಹೆಸರಿನಿಂದಲೋ ಖರೀದಿ ಮಾಡಿರುವಂತೆ ನಕಲಿ ದಾಖಲೆ ಸೃಷ್ಟಿಸಿ ರಾತ್ರೋರಾತ್ರಿ ಕಲ್ಲುಗುಡ್ಡಗಳಿಗೆ ಡೈನಾಮೆಂಟ್ ಇಟ್ಟು ಬೆಳಕಾಗುವುದರೊಳಗೆ ಜೆಸಿಬಿ ಸಹಾಯದಿಂದ ಹಸನು ಮಾಡಿ ಫೆನ್ಸ್ (ತಂತಿ) ಬೇಲಿ ಹಾಕಲಾಗುತ್ತಿದೆ. ಈ ವಿಷಯವು ಗಂಭೀರವಾಗಿರುವುದರಿಂದ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯಲು ಬಯಸುತ್ತೇನೆ.

**ಹೇಳಿಕೆ:**

ಕೋಲಾರ ನಗರಕ್ಕೆ ಅಂಟಿಕೊಂಡಿರುವ ಶತಶೃಂಗ ಬೆಟ್ಟದ ಸಾಲಿನಲ್ಲಿರುವ ಅಂತರಗಂಗೆ ಸುತ್ತಮುತ್ತ ಹಳ್ಳಿಗಳ ಪೈಕಿ ಕೋಲಾರ ತಾಲ್ಲೂಕು, ಕಸಬಾ ಹೋಬಳಿ, ಪಾಪರಾಜನಹಳ್ಳಿ ಗ್ರಾಮಕ್ಕೆ ಸೇರಿದ ಸ.ನಂ.48 ಹಾಗೂ ಬೆಟ್ಟಹೊಸಹಳ್ಳಿ ಗ್ರಾಮದ ಸ.ನಂ.09 ರ ಸರ್ಕಾರಿ ಜಮೀನುಗಳ ಒತ್ತುವರಿ ಮಾಡಿ ಅಕ್ರಮವಾಗಿ ಖಾತೆ ಮಾಡಿರುವ ಬಗ್ಗೆ ದಿನಾಂಕ:11/09/2025 ರಂದು 10 ಜನಗಳಿಗೆ ಅಕ್ರಮವಾಗಿ ಮಾಡಿರುವ ಖಾತೆಗಳನ್ನು ರದ್ದುಪಡಿಸಿ ಇದರಲ್ಲಿ ಭಾಗಿಯಾದವರ ಮೇಲೆ ಕಾನೂನು ಕ್ರಮ ಕೈಗೊಳ್ಳಲು/ಎನ್.ಸಿ.ಆರ್/ಸಿಆರ್/29/2025-26, ದಿನಾಂಕ:11/09/2025 ರಂತೆ ತಹಶೀಲ್ದಾರ್ ಕೋಲಾರ ರವರು ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಪಂಚಾಯಿತಿ ಕೋಲಾರ ರವರಿಗೆ ಪತ್ರ ಬರೆದಿರುತ್ತಾರೆ ಹಾಗೂ ಪಾಪರಾಜನಹಳ್ಳಿ ಗ್ರಾಮದ ಸ.ನಂ.48 ಮತ್ತು ಬೆಟ್ಟಹೊಸಹಳ್ಳಿ ಗ್ರಾಮದ ಸ.ನಂ.09 ರ ಸರ್ಕಾರಿ ಜಮೀನನ್ನು ಪದೇ ಪದೇ ಅಕ್ರಮವಾಗಿ ಒತ್ತುವರಿ ಮಾಡಿ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆಯದೇ ಅಕ್ರಮವಾಗಿ ಜಮೀನನ್ನು ವಿಂಗಡಿಸಿ ನೈಸರ್ಗಿಕ ಸ್ವರೂಪಕ್ಕೆ ದಕ್ಕೆ ಮಾಡಿ ಶಿಲಾ ಕಲ್ಲು ಸ್ವರೂಪಗಳನ್ನು ಹಾನಿ ಮಾಡಿ ಕಲ್ಲು ಬಂಡೆಗಳು ಒಡೆದಿರುವವರ ವಿರುದ್ಧ ಕಲ್ಲುಗಣಿ ಗುತ್ತಿಗೆ ಕಾಯ್ದೆ ಅನ್ವಯ ದಾವೆ ಹೂಡಿ ಸೂಕ್ತ ಕ್ರಮ ಜರುಗಿಸಲು ಹಿರಿಯ ಭೂವಿಜ್ಞಾನಿಗಳು ಗಣಿ ಮತ್ತು ಭೂವಿಜ್ಞಾನ ಇಲಾಖೆ ಕೋಲಾರ ಜಿಲ್ಲೆ, ಕೋಲಾರ ರವರಿಗೆ ನಿರ್ದೇಶಿಸಲಾಗಿದೆ. ಅದೇ ರೀತಿಯಾಗಿ ಸದರಿ ಬೆಟ್ಟದಲ್ಲಿ ನೈಸರ್ಗಿಕ ಸಂಪನ್ಮೂಲಗಳನ್ನು ಹಾಳು

ಮಾಡುತ್ತಿರುವವರ ವಿರುದ್ಧ ಸೂಕ್ತ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲು ಹಾಗೂ ಹಗಲು ರಾತ್ರಿ ಪೊಲೀಸ್ ಗಸ್ತು ನಿರ್ವಹಿಸಲು ತಿಳಿಸಲಾಗಿದೆ. ಮುಂದುವರೆದು ಆರಕ್ಷಕ ನಿರೀಕ್ಷಕರು ಗ್ರಾಮಾಂತರ ಪೊಲೀಸ್ ಠಾಣೆ ಕೋಲಾರ ರವರಲ್ಲಿ ದಿನಾಂಕ:11/09/2025 ರಂದು ಅಪರಾಧ ಸಂಖ್ಯೆ :0375/2025 ರಂತೆ ಸೈಯದ ನವಾಜ್‌ಪಾಷ ಬಿನ್ ಅಬ್ದುಲ್ ಪಾಷ ಮತ್ತು ಜುನೈದ್ ಬಿನ್ ಜಮಸಿದ್ ರವರ ವಿರುದ್ಧ ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ 192(ಎ) (1) ರಂತೆ ಪ್ರಕರಣ ದಾಖಲಿಸಲಾಗಿದೆ ಹಾಗೂ ಒತ್ತುವರಿ ಮಾಡದಂತೆ ನಾಮಫಲಕಗಳನ್ನು ಹಾಗೂ ತಂತಿಬೇಲಿ ಅಳವಡಿಸಲು ಕ್ರಮವಹಿಸಲಾಗುತ್ತಿದೆ.

ಆರ್‌ಡಿ 174 ಎಲ್‌ಜಿಕ್ಯೂ 2025

(ಕೃಷ್ಣಬೈರೇಗೌಡ)
ಕಂದಾಯ ಸಚಿವರು